# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರ: 1603-2018**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ಕೃಷ್ಣ, 34 ವರ್ಷ,
ತಂದೆ: ಈಶ್ವರ ಆಚಾರಿ,
ವಾಸ: ಲಕ್ಷ್ಮೀನಗರ ಕೊಳಲಗಿರಿ,
ಉಪ್ಪೂರು, ಉಡುಪಿ ತಾಲೂಕು.

2. ನಟರಾಜ್, 24 ವರ್ಷ,
ತಂದೆ: ನಾರಾಯಣ ಮೊಗೇರ,
ವಾಸ: ಸೋಡಿಗದ್ದೆ, ಭಟ್ಕಳ.

3. ಮಾರೂಫ್, 21 ವರ್ಷ,
ತಂದೆ: ಸೈಯದ್ ಅಯ್ಯುಬ್ ಶೇಖ್,
ವಾಸ: ಉಸ್ಮಾನ್ ನಗರ, ಭಟ್ಕಳ,
ಹಾಲಿ ವಾಸ: ಎಸ್.ಎಂ. ಗಾರ್ಡನ್,
ಜಾಲಿ ರಸ್ತೆ, ಭಟ್ಕಳ.

4. ರಶೀದ್ ಯಾನೆ ಮೊಹಿದ್ದೀನ್, 35 ವರ್ಷ,
ತಂದೆ: ಕೆ. ಮಹ್ಮದ್ ಬ್ಯಾರಿ,
ವಾಸ: ಅಲುಂದೂರು ರಸ್ತೆ,
ಕುಂಬ್ರಿಕೋಡ್ ಹೌಸ್,
ಶಿರೂರು, ಕುಂದಾಪುರ ತಾಲೂಕು. --- ಆರೋಪಿತರು

**:ದೋಷಾರೋಪಣೆ:**

ಶ್ರೀಮತಿ ರೋಹಿಣಿ.ಡಿ. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:

ಕುಂದಾಪುರ ಪೋಲಿಸ್ ಠಾಣಾ ಸರಹದ್ದಿನಲ್ಲಿ 1 ರಿಂದ 4 ನೇ ಆರಪಾದಿತರದ ನೀವುಗಳು ಕಳುವು ಮಾಡುವ ಸಮಾನ ಉದ್ದೇಶಿತರಾಗಿ ದಿನಾಂಕ 22.11.2017 ರಂದು ರಾತ್ರಿ ಸಮಯದಲ್ಲಿ ಕುಂದಾಪುರ ತಾಲೂಕು, ಹಂಗಳೂರು ಗ್ರಾಮದ ರಾಹೆ 66 ರ ಅಂಚಿನಲ್ಲಿರುವ ಸಾಕ್ಷಿ 1 ನೇಯವರ ಮನೆಯ ಹಿಂದಿನ ಎರಡು ಬಾಗಿಲುಗಳ ಚಿಲಕ ಮುರಿದು ಮನೆಯೊಳಗೆ ಪ್ರವೇಶಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ 1 ನೇಯವರ ಬಾಬ್ತು ಸ್ವಿಪ್ಟ್ ಕಾರು ನಂಬ್ರ ಕೆಎ 20 ಜಡ್ 2248 ನೇ ಕಾರಿನ ಕೀಯನ್ನು ತೆಗೆದು ಮನೆಯ ಹೊರಗೆ ಕಾರ್ ಶೆಡ್‌ನಲ್ಲಿ ನಿಲ್ಲಿಸಿದ್ದ ಕಾರನ್ನು ಕಳವು ಮಾಡಿ ಕಾರಿಗೆ ಕೆಎ 51 ಎನ್ 1122 ನೇ ನಂಬ್ರ ಅಳವಡಿಸಿ ಓಡಾಡಿಕೊಂಡಿದ್ದು . ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮನೆಯೊಳಗೆ ರೂಮಿನಲ್ಲಿದ್ದ ಗೋದ್ರೇಜ್ ಒಡೆದು ಬಟ್ಟೆ ಹಾಗೂ ಕಾಗದ ಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿ ಹುಡುಕಾಡಿ ಕಾಪಾಟಿನಲ್ಲಿದ್ದ ಸಾಕ್ಷಿ 1 ನೇಯವರ ಬಾಬ್ತು ಸ್ವಿಫ್ಟ್ ಕಾರು ನಂಬ್ರ ಕೆಎ 20 ಜಡ್ 2248 ನೇ ಕಾರಿನ ಕೀಯನ್ನು ತೆಗೆದು ಕಾರನ್ನು ಕಳವು ಮಾಡಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 12.07.2022.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

Phs

2. ಪದ್ಮ ಪಾಮಡಿ , 42 ವರ್ಷ,
ಗಂಡಃ ರಾಜೇಶ್ ನಾಯ್ಕ @ ರಾಜು @ ರಾಜು ಪಾಮಡಿ,
ಟೋಲ್ ನಾಕಾ,
ಜನತ್ ನಗರ,
ಧಾರವಾಡ ಜಿಲ್ಲೆ 2 ನೇ ಅಡ್ಡರಸ್ತೇ,
ಧಾರಾವಾಡ ಜಿಲ್ಲೆ.